**O.S.No.166/2015 DW.1**

ದಿಃ **17-12-2022** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಪಿ.ವಿ.ಪಿ. ವಕೀಲರವರಿಂದಃ

ನನ್ನ ತಂದೆಗೆ ಒಟ್ಟು **07** ಜನ ಮಕ್ಕಳು. ಪ್ರತಿವಾದಿ ನನಗೆ ವೈಯಕ್ತಿಕವಾಗಿ ಕಾಸ ಅಣ್ಣನಾಗಬೇಕು. ಈ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನನ್ನ ತಂದೆ ಮತ್ತು ವಾದಿಯ ತಂದೆ ಕಾಸ ಅಣ್ಣ-ತಮ್ಮಂದಿರು. ದಾವಾ ಸ್ವತ್ತು ಮೂಲತವಾಗಿ ಒಲಿ ಸಿದ್ದಪ್ಪ ಇವರ ಆಸ್ತಿಯಾಗಿತ್ತು. ಅವರು ಬದುಕ್ಕಿದ್ದಾಗ ಅವರ ಮಕ್ಕಳೊಂದಿಗೆ ಉಳಿಮೆ ಮಾಡುತ್ತಿದ್ದ ಸಂಗತಿ ನನಗೆ ತಿಳಿದಿರುತ್ತದೆ. ಸದರಿಯವರಿಗೆ ದಾವಾ ಸ್ವತ್ತನ್ನು ಹೊರತುಪಡಿಸಿ ಒಟ್ಟು **24** ಎಕರೆ ಜಮೀನು ಇತ್ತು. ಸದರಿಯವರು **1990** ರಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರ ಹೆಂಡತಿ **2003** ರಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರ ತೀರಿಕೊಂಡ ನಂತರ ದಾವಾ ಸ್ವತ್ತಿಗೆ ವಾದಿಯವರು ವಾರಸುದಾರರು ಎಂದರೆ ಸರಿ. ವಾದಿಯವರ ತಂದೆ-ತಾಯಿ ತೀರಿಕೊಂಡ ನಂತರ ದಾವಾ ಸ್ವತ್ತನ್ನು ಒಳಗೊಂಡಂತೆ ಎಲ್ಲಾ ಆಸ್ತಿಗಳನ್ನು ತಮ್ಮ ಹೆಸರಿಗೆ ಖಾತಾ ಮಾಡಿಕೊಂಡಿರುತ್ತಾರೆ. ದಾವಾ ಸ್ವತ್ತು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ದನದ ಕೊಟ್ಟಿಗೆ ಮತ್ತು ಫಾರ್ಮ್ ಹೌಸ್ ಇರುತ್ತದೆ.

**02. 2005** ರಲ್ಲಿ ವಾದಿಗಳು ಪ್ರತಿವಾದಿಗೆ ಇರಲು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ವಾದಿಗೆ ಸಂಬಂಧಿಕರು ಆದ ಕಾರಣ ಹಾಗೇ ಇರಲು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ಮರಳಿ ಕೇಳಿದಾಗ ಕೊಡುತ್ತೇನೆ ಎಂದು ಪ್ರತಿವಾದಿ ಕೊಡುತ್ತೇನೆ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಯ ಅನುಮತಿಯ ಮೇರೆಗೆ ಇದ್ದಾನೆ ಎಂದರೆ ಸರಿಯಲ್ಲ. ಸದ್ಯ ವಾದಿಗಳಿಗೆ ದಾವಾ ಸ್ವತ್ತು ಅವಶ್ಯಕತೆ ಇರುವುದರಿಂದ ಮರಳಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತನ್ನು ವಾದಿಗಳಿಗೆ ಮರಳಿ ಕೊಡಲು ಮುಂದುಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ **14-10-2015** ರಂದು ದಾವಾ ಸ್ವತ್ತನ್ನು ಮರಳಿ ಕೇಳಿ ವಾದಿಗಳು ನಮಗೆ

ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿ. ವಾದಿಗಳಿಗೆ ದಾವಾ ಸ್ವತ್ತನ್ನು ಮರಳಿ ಕೊಡುವುದನ್ನು ತಪ್ಪಿಸಲು ವಾದಿಗಳು ಕ್ರಯ ಕರಾರು ಮಾಡಿಕೊಟ್ಟಿದ್ದಾರೆ ಸುಳ್ಳಾಗಿ ಪ್ರತಿಪಾದಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ಅವರ ತಾಯಿ ದಾವಾ ಸ್ವತ್ತನ್ನು ಮಾರುವ ಉದ್ದೇಶಕ್ಕಾಗಿ ಯಾವುದೇ ರೀತಿ ಖರೀದಿ ಕರಾರು ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ಕ್ರಯ ಕರಾರನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಅದರ ಮೇರೆಗೆ ಸ್ವಾಧೀನವನ್ನು ಕೊಡಲು ನಿರಾಕರಿಸಿದ್ದೇವೆ ಎಂದರೆ ಸರಿಯಲ್ಲ.

**03.** ನಿಡಿಃ **16** ಕ್ರಯ ಕರಾರದ ಮೇರೆಗೆ ಪ್ರತಿವಾದಿ ದಾವಾ ಸ್ವತ್ತಿನ ಸಾವಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾವು ಯಾವುದೇ ರೀತಿಯಾದ ಅಭಿವೃದ್ಧಿ ಮಾಡಿಲ್ಲ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಂದ ಅಭಿವೃದ್ಧಿ ಪಡಿಸಲು ಯಾವುದೇ ರೀತಿಯಾದ ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೌಲ್ಯ ಅಧಿಕ ಆಗಿದ್ದರಿಂದ ಅದರ ಲಾಭವನ್ನು ಪಡೆಯಲು ಪಂಚಾಯಿತಿಯಲ್ಲಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ವಾದಿಗಳೇ ಕಾಂಪೌಂಡ್ ಮತ್ತು ಫಾರ್ಮ್ ಹೌಸ್ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ನಾವು **2005** ರಿಂದ ದಾವಾ ಸ್ವತ್ತಿನ ಕಬ್ಜಾದಲ್ಲಿ ಇದ್ದೇವೆ ಎಂದರೆ **1999** ರಿಂದ ಕಬ್ಜಾದಲ್ಲಿ ಇರುತ್ತೇವೆ. ಸದರಿ ವಿಷಯ ಸುಳ್ಳು ಎಂದರೆ ಸರಿಯಲ್ಲ.

**04.** ನನ್ನ ಅಣ್ಣ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ನನ್ನ ಇನ್ನೊಬ್ಬ ತಮ್ಮ ಮುದುಕಪ್ಪ ಮತ್ತು ನಾನು ಸರ್ಕಾರಿ ನೌಕರರು ಎಂದರೆ ಸರಿ. ಪ್ರತಿವಾದಿ ವ್ಯವಸಾಯ ಮಾಡುತ್ತಿದ್ದರಿಂದ ವಾದಿಯವರು ಅನುಮತಿ ಪಡೆದು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಗಳು ಮತ್ತು ಪ್ರತಿವಾದಿಯ ಮಧ್ಯ ಆದ ಮಾತು-ಕತೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಸತ್ಯ ಸಂಗತಿ ಹೊರಗಡೆ ಬರುತ್ತದೆ ಎಂದು ಪ್ರತಿವಾದಿ ನ್ಯಾಯಾಲಯಕ್ಕೆ ಸಾಕ್ಷ್ಯವನ್ನು ನುಡಿಯಲು ಬಂದಿರುವುದಿಲ್ಲ ಎಂದರೆ

ಸರಿಯಲ್ಲ. ನಿಡಿಃ **16** ಕ್ರಯ ಕರಾರರನ್ನು ನಾವೇ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರದಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಒಲಿ ನಿರ್ಮಲಮ್ಮ ನನ್ನ ಹೆಂಡತಿ. ಈ ಹಿಂದೆ ಹಡಗಲಿ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಆಗಿದ್ದರು. ಅವರ ಪ್ರಭಾವನ್ನು ಬಳಸಿ ಅವರ ಹೆಸರಿನಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಲೈಸೆನ್ಸ್ ನ್ನು ಅಕ್ರಮವಾಗಿ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿಗೆ ಸದ್ಯ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಲೈಸೆನ್ಸ್ ಇರುತ್ತದೆ. ವಾದಿ ಈ ಮೊದಲು ಕಟ್ಟಿಸಿದ ದನದ ಕೊಟ್ಟಿಗೆ ಮತ್ತು ಫಾರ್ಮ್ ಹೌಸ್ ಗೆ ಅಕ್ರಮವಾಗಿ ಲೈಸೆನ್ಸ್ ಪಡೆದಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಅಕ್ರಮವಾಗಿ ಡೋರ್ ನಂಬರ್ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿ ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು-ವಿಚಾರಣೆಃಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

ಸಹಿ/-
(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ